‘ಆವಾಗ ನೀವೆಲ್ಲಿದ್ದಿರಿ?’

‘ನಾನು ಕ್ಯಾಂಟೀನ್‌ಗೆ ಹೋಗಿದ್ದೆ. ಅದು ನಾವು ಕ್ಯಾಂಟೀನಿಗೆ ಹೋಗುವ ಹೊತ್ತು. ಪ್ರೊ. ಗುಪ್ತಾ ಯಾವತ್ತೂ ಕ್ಯಾಂಟೀನಿಗೆ ಬರುತ್ತಿರಲಿಲ್ಲ. ಅವರು ಮಾತ್ರ ಲ್ಯಾಬ್‌ನಲ್ಲಿದ್ದರು.’

‘ನೀವು ಕ್ಯಾಂಟೀನ್‌ಗೆ ಹೊರಟ ಮೇಲೆ ಲೀಕೇಜ್ ಶುರುವಾಯಿತೆ?’

‘ಇನ್ಸಿಡೆಂಟ್ ಆಗುವಾಗ ನಾವು ಕ್ಯಾಂಟೀನ್‌ನಲ್ಲಿದ್ದೆವು’

‘ರಂಜಕ ಯಾವುದಕ್ಕೆ ಬಳಸ್ತಾರೆ, ಭಾಸ್ಕರ್?’

‘ಲ್ಯಾಬ್‌ನಲ್ಲಿ ರಂಜಕ ಯಾವುದಕ್ಕೆ ಬಳಸ್ತಾರೇಂತ ಕೇಳ್ತೀರಲ್ಲ?’

‘ಇರಲಿ. ನೀವು ಸಂಶೋಧನೆ ಮಾಡಿ ಸಿದ್ಧಪಡಿಸಿದ ಎಷ್ಟು ಲೇಖನಗಳು ವಿದೇಶದ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ?’

‘ಇಲ್ಲ, ಒಂದೂ ಇಲ್ಲ’ ಪ್ರೊಫೆಸರ್ ಮಾತು ನಿಷ್ಠುರತೆಯಿಂದ ಕೂಡಿತ್ತು.

‘ಹಾಗಾದರೆ ಕಳೆದ ಅಷ್ಟೂ ವರ್ಷಗಳಲ್ಲಿ ನೀವು ಸಾಧಿಸಿದ್ದೇನು?’

ಪ್ರೊ. ಭಾಸ್ಕರ್ ಒಂದು ನಿಮಿಷ ಮೌನ ತಾಳಿದರು. ನಿಧಾನವಾಗಿ, ಡ್ರಾಯರಿನಿಂದ ವಿಸ್ಕಿ ಬಾಟ್ಲಿ ತೆಗೆದು, ಗ್ಲಾಸಿಗೆರೆದು, ‘ಇಫ್ ಯು ಡೋಂಟ್ ಮೈಂಡ್’ ಎನ್ನುತ್ತ ಅವರ ಉತ್ತರವನ್ನೂ ನಿರೀಕ್ಷಿಸದೆ ನೀರು ಹೊಯ್ದು, ಗಂಟಲಿಗೆ ಸುರಿದುಕೊಂಡರು. ಸ್ವಲ್ಪ ತಡೆದು, ಗಂಟಲು ಸರಿಪಡಿಸಿಕೊಂಡು ಹೇಳತೊಡಗಿದರು:

‘ಹನ್ನೊಂದು ವರ್ಷಗಳ ಕಾಲ ನಾನು ಗುಪ್ತಾ ಇನ್ಸ್‌ಟ್ಯೂಟ್‌ನಲ್ಲಿ ಪ್ರೊ. ಗುಪ್ತಾರ ಕೈಕೆಳಗೆ ಸಂಶೋಧನಾ ವಿದ್ಯಾರ್ಥಿಯಾಗಿ, ರಿಸರ್ಚ್ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದೆ. ಪ್ರಾರಂಭಿಕ ಹಂತದಲ್ಲಿ ಕೆಲವು ರಿಸರ್ಚ್ ಪೇಪರುಗಳನ್ನು ಸಿದ್ಧಪಡಿಸಿ ಅದನ್ನು ಪ್ರೊ. ಗುಪ್ತಾರಿಗೆ ತೋರಿಸಿದ್ದೆ. ಅವರು ಸಮಯ ಸಿಕ್ಕಾಗ ಓದಿ ನೋಡುವೆನೆಂದು ತೆಗೆದಿರಿಸುತ್ತಿದ್ದರು. ನಡುವೆ ನಾನು ರಿಸರ್ಚಿನಲ್ಲಿ ವಿಶೇಷ ಪ್ರಗತಿ ಸಾಧಿಸಿದೆ. ಕಾಫಿ ಗಿಡದ ಎಲೆಯಿಂದ ನೂರಾರು ಗಿಡಗಳು ಹುಟ್ಟುವುದೂ, ರೊಬಾಸ್ಟಾ, ಅರೇಬಿಕಾ ಮುಂತಾದ ತಳಿಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಗಿಡಗಳು ಬೀಜ ಕೊಡುವುದೂ ನನ್ನ ಸಂಶೋಧನೆಯಿಂದ ಸಾಬೀತಾಗುವುದರಲ್ಲಿತ್ತು. ನನ್ನ ಎಲ್ಲ ಸಂಶೋಧನೆಯನ್ನು ಡಾ. ಗುಪ್ತಾ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು. ಈ ನಡುವೆ ಡಾ. ಗುಪ್ತಾ ಹತ್ತಾರು ಬಾರಿ ವಿದೇಶಕ್ಕೆ ಹೋಗಿ ಬಂದಿದ್ದರು. ಪ್ರತಿ ಬಾರಿ ಹೋದಾಗಲೂ ವಿಶೇಷ ಪ್ರಶಸ್ತಿಗಳನ್ನು ಹೊತ್ತು ತರುತ್ತಿದ್ದರು.

ನಡುವೆ ವಿದೇಶದ ವಿಜ್ಞಾನ ಪತ್ರಿಕೆಯೊಂದರಲ್ಲಿ ನನ್ನ ಮಹತ್ವದ ಲೇಖನವೊಂದು ಡಾ. ಗುಪ್ತಾರ ಹೆಸರಿನಲ್ಲಿ ಪ್ರಕಟವಾದದ್ದು ಕಂಡು ಬಂತು! ಅಲ್ಲಿ ಕಾಫಿ ಎಲೆಗಳಿರಲಿಲ್ಲ. ತೆಂಗಿನ ಗರಿಗಳಿದ್ದವು! ನನ್ನ ಎಲ್ಲಾ ಸಂಶೋಧನಾ ಲೇಖನಗಳನ್ನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಅವರು ಬಳಸಿಕೊಳ್ಳುತ್ತಿದ್ದಾರೆಂಬುದನ್ನು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ವಿದೇಶಗಳಲ್ಲಿ ಡಾ. ಗುಪ್ತಾ ಭಾಗವಹಿಸಿದ ಹೆಚ್ಚಿನ ಗೋಷ್ಠಿಗಳಲ್ಲಿ ನನ್ನ ಪೇಪರ್‌ಗಳನ್ನೇ ಓದಿದ್ದರು! ಅವರು ಯಾವ್ಯಾವ ದೇಶಗಳಿಗೆ ಪ್ರಬಂಧಮಂಡನೆಗೆಂದು ಹೋಗಿದ್ದರೋ ಆಯಾ ದೇಶಗಳಿಂದ ಮಾಹಿತಿ ತರಿಸಿಕೊಂಡೆ. ನನ್ನ ಎಲ್ಲ ಅವಕಾಶಗಳನ್ನು ಅವರು ಕಸಿದುಕೊಂಡಿದ್ದರು. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳ ಸಾಲಿನಲ್ಲಿ ಅವರ ಹೆಸರು ಬಂದಾಗಿತ್ತು. ನಾನು ನಾನಾಗಲೇ ಇಲ್ಲ. ಹನ್ನೊಂದು ವರ್ಷಗಳಲ್ಲಿ ಡಾ. ಗುಪ್ತಾರನ್ನೂ ಅವರ ಇನ್‌ಸ್ಟಿಟ್ಯೂಟನ್ನೂ ಬಹಳಷ್ಟು ಬೆಳೆಸಿದ್ದೆ. ನನ್ನನ್ನು ನಾನು ಪೂರ್ತಿಯಾಗಿ ಕಳೆದುಕೊಂಡಿದ್ದೆ. ಇನ್ನು ಇಲ್ಲಿದ್ದರೆ ನನಗೆ ಭವಿಷ್ಯವಿಲ್ಲ ನಾನು ಸ್ವತಂತ್ರವಾಗಿ ಏನನ್ನೋ ಸಾಧಿಸಬೇಕೆಂದು ಇಲ್ಲಿಗೆ ಬಂದೆ’ ಎನ್ನುತ್ತಲೇ ಪ್ರೊಫೆಸರ್ ಗ್ಲಾಸನ್ನು ಖಾಲಿ ಮಾಡಿ, ಮತ್ತೂ ಒಂದಷ್ಟು ವಿಸ್ಕಿ ಎರೆದುಕೊಂಡರು.

ನಟರಾಜ್‌ನ ಹಿಂದೆ ಸಬ್‌ಇನ್ಸ್‌ಪೆಕ್ಟರ್ ಬಂದು ನಿಂತದ್ದನ್ನು ಗಮನಿಸಿದ ಪ್ರೊಫೆಸರ್ ಒಮ್ಮೆಲೆ ರೇಗಿದರು:

‘ಮಿಸ್ಟರ್ ನಟರಾಜ್, ದಯವಿಟ್ಟು ಇನ್ಸ್‌ಪೆಕ್ಟರನ್ನು ಹೊರಗೆ ಕಳುಹಿಸಿ. ನನಗೆ ಪೊಲೀಸರೆಂದರೆ ಆಗಿ ಬರೋದಿಲ್ಲ. ಅವರನ್ನು ಹೊರಗೆ ಕಳುಹಿಸಿ. ಪ್ಲೀಸ್ ಗೋ ಔಟ್’.

ನಟರಾಜ್ ಕಣ್ಣು ಸನ್ನೆ ಮಾಡಿದರು. ಇನ್ಸ್‌ಪೆಕ್ಟರ್ ಹೊರ ನಡೆದರು.

‘ಯಾವುದಕ್ಕೂ ಮುಂದೆ ನಿಮ್ಮನ್ನು ನೋಡಿಕೊಳ್ಬೇಕಾದವರು ಅವ್ರೇ ತಾನೆ?’

‘ಅಂದ್ರೇನು ಮಿಸ್ಟರ್ ನಿಮ್ಮ ಅಂಬೋಣ? ನಾನು ಪ್ರೊ. ಗುಪ್ತಾರನ್ನು ಕೊಲೆ ಮಾಡಿದ್ದೇನೆಂದೆ?’

‘ನಾ ಎಲ್ಲಿ ಹಾಗಂದೆ? ಆದ್ರೂ ನಿಮಗೆ ನೋವಾದದ್ದು, ಅವರನ್ನು ಕೊಂದು ಹಾಕುವಷ್ಟು ಸಿಟ್ಟು ಬಂದದ್ದು ಎಲ್ಲ ನಿಜ ತಾನೆ?’

‘ಆಂ! ನನಗೆ ನೋವಾದದ್ದು ನಿಜ. ಅದು... ಅದಕ್ಕಾಗಿ ಅಲ್ಲ’.

‘ಮತ್ತೆ? ಮತ್ಯಾವುದಕ್ಕೆ?’

ತಾನು ಹೇಗಿದ್ದರೂ ಸಿಕ್ಕಿ ಬೀಳುವುದು ಖಾತ್ರಿ ಎನ್ನಿಸಿ ಇನ್ನಾದರೂ ಬಹುಕಾಲದಿಂದ ಮುಚ್ಚಿಟ್ಟು ಹಿಂಸೆಪಡುತ್ತಿದ್ದ ಸತ್ಯವೊಂದನ್ನು ಹೇಳಿ ಹಗುರಾಗಬೇಕೆಂದುಕೊಂಡರು.

‘ನಾನು ದೆಹಲಿಯ ಗುಪ್ತಾ ರಿಸರ್ಚ್ ಸಂಸ್ಥೆಗೆ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿದ ಹೊಸತರಲ್ಲಿ ಅಮೇರಿಕದ ಕ್ಯಾಂಬ್ರಿನಾ ಯೂನಿವರ್ಸಿಟಿಯಲ್ಲಿ ಡಾ. ಗುಪ್ತಾರದ್ದೊಂದು ಉಪನ್ಯಾಸವಿತ್ತು. ಅಲ್ಲಿ ಅವರು ಮಂಡಿಸಿದ ಪ್ರಬಂಧದಲ್ಲಿ ತೆಂಗಿನ ಗರಿಯ ಟಿಶ್ಯೂ ಕಲ್ಚರ್ ಕುರಿತು ಮಾತನಾಡಿದ್ದರು. ಅವರ ಮಾತಿನ ಬಳಿಕದ ಲೋಕಾಭಿರಾಮದಲ್ಲಿ ಟಿಶ್ಯೂ ಕಲ್ಚರ್ ವಿಭಾಗದ ಮುಖ್ಯಸ್ಥ ಡಾ. ಮ್ಯಾನ್ಯುವಲ್ ಹ್ಯಾರಿಸ್ ತಮ್ಮ ವಿಭಾಗದಲ್ಲಿ ಕಾಫಿ ಗಿಡಗಳ ಮೇಲೆ ಸಂಶೋಧನೆ ಮಾಡುತ್ತಿದ್ದ ಭಾಸ್ಕರ್ ಎಂಬ ರಿಸರ್ಚ್ ಅಸಿಸ್ಟಂಟ್ ಮಾತಿನ ಚಕಮಕಿಯಲ್ಲಿ ತನ್ನ ಕುತ್ತಿಗೆ ಹಿಚುಕಿ ಕೊಂದೇ ಬಿಡುತ್ತಿದ್ದ. ಮೂರು ವರ್ಷ ಜೈಲಿನಲ್ಲಿದ್ದ. ಇಂಡಿಯಾಕ್ಕೆ ವಾಪಸ್ಸು ಹೋಗುವ ಷರತ್ತಿನ ಮೇರೆಗೆ ‘ಬೆನಿಫಿಟ್ ಆಫ್ ಡೌಟ್’ ಬಳಸಿಕೊಂಡು ಆತ ಕೇಸ್ ವಾಪಸ್ ಪಡೆದ.

***

ಇಂಡಿಯಾಕ್ಕೆ ಮರಳಿದ ಮೇಲೆ ನನ್ನನ್ನು ಹದ್ದುಬಸ್ತಿನಲ್ಲಿಡಲು ಡಾ. ಗುಪ್ತಾ ಅದನ್ನೊಂದು ಅಸ್ತ್ರವಾಗಿ ಬಳಸಿಕೊಂಡರು. ಈ ಹತ್ತು ವರ್ಷದಲ್ಲಿ ನಾನಾತನ ಕೈಗೊಂಬೆಯಾಗಿದ್ದೆ. ನನ್ನನ್ನೊಂದು ಕ್ರಿಮಿಯಂತೆ ನೋಡಿಕೊಂಡರು’, ಭಾಸ್ಕರ್ ಮತ್ತೆ ನಡುಗತೊಡಗಿದರು.

ಬಹಳ ಶಾಂತವಾಗಿ ನಟರಾಜ್ ಮಾತು ಮುಂದುವರಿಸಿದರು. ‘ಸಾರಿ ಭಾಸ್ಕರ್, ಸಿಲಿಂಡರ್ ಸ್ಫೋಟದಲ್ಲಿ ಡಾ. ಗುಪ್ತಾ ನಿಧನರಾದರೆಂದು ಪೋಸ್ಟ್ ಮಾರ್ಟಮ್‌ನಿಂದ ತಿಳಿದುಬಂತು. ಕೋರ್ಟು ಕೂಡ ನಿಮ್ಮ ಹೇಳಿಕೆಯನ್ನು ಒಪ್ಪಿಕೊಂಡಿತು. ಆ ಅಪಘಾತ ನಿಜವಾಗಿ ಹೇಗುಂಟಾಯಿತು ಎಂಬುದು ನಿಮಗೆ ಗೊತ್ತಿರಬೇಕಲ್ಲ ಪ್ರೊ. ಭಾಸ್ಕರ್?’

ಪ್ರೊ. ಭಾಸ್ಕರ್ ಮಾತನಾಡಲಿಲ್ಲ.

‘ಪೋಸ್ಟ್ ಮಾರ್ಟಮ್ ರಿಪೋರ್ಟಿನಿಂದ ನಿಮಗೇನೂ ಹಾನಿಯಾಗಲಿಲ್ಲ. ಅಲ್ಲಿ ಉಳಿದಿದ್ದ ರಂಜಕದ ಭಸ್ಮದಿಂದಲೂ ನಿಮಗೆ ತೊಂದರೆಯಾಗಲಿಲ್ಲ. ಅದು ಸರಿನೆ. ನೀವು ಅಲ್ಲೇ ಮುಂದುವರಿಯಬಹುದಾಗಿತ್ತು. ಅದೂ ಸರಿನೆ. ಅದೇ ವೇಳೆ ಊರಲ್ಲಿ ನಿಮ್ಮ ತಂದೆ ನಿಧನರಾದ ಸುದ್ದಿ ಬಂತು. ನೀವು ಊರಿಗೆ ಬರುವುದಕ್ಕೆ ಒಳ್ಳೆಯ ನೆಪವಾಯಿತು. ಅಲ್ಲವೇ ಪ್ರೊ. ಭಾಸ್ಕರ್?’

‘...’

‘ಆ ದಿನ ರಾತ್ರಿ ಪ್ಲಾಂಟರ್ ಸೋಮಣ್ಣನವರ ಮನೆಯಲ್ಲಿ ಪಾರ್ಟಿ ನಡೆಯುತ್ತಿದ್ದಂತೆಯೇ ನಡುವೆ ನೀವು ಎದ್ದು ಹೋದಿರಲ್ಲ, ಎಲ್ಲಿಗೆ?’

‘ಇಲ್ಲ, ನಾನೆಲ್ಲೂ ಹೋಗಿಲ್ಲ. ಯಾಕೆ ಈ ಸಂದೇಹ?’ ಅದಾಗಲೇ ಬಾಗಿಲ ಪಕ್ಕದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಕಾಣಿಸಿಕೊಂಡರು. ನಟರಾಜ್ ಅವರನ್ನೇ ದುರುಗುಟ್ಟಿ ನೋಡತೊಡಗಿದರು.

‘ಕ್ಷಮಿಸಿ, ಪಾರ್ಟಿಯ ಪ್ರಾರಂಭದಲ್ಲಿ...’

ನಟರಾಜ್ ಮುಂದುವರಿಸಿದರು: ‘ಅದ್ಯಾಕೆ ಪೊಲೀಸರೆಂದರೆ ಬೆಚ್ಚಿ ಬೀಳ್ತೀರಿ? ನೀವು ಅಮೆರಿಕದಲ್ಲಿದ್ದಾಗ ಪೊಲೀಸರಿಂದೇನಾದರೂ ಕೆಟ್ಟ ಅನುಭವ ಆಗಿತ್ತೆ?’

‘ಮಿ. ನಟರಾಜ್, ಡೋಂಟ್ ಆಸ್ಕ್ ಮಿ ಅನ್ನೆಸಸರಿ ಕ್ವೆಶ್ಚನ್ಸ್’, ಪ್ರೊಫೆಸರ ಮಾತು ವಿಪರೀತವಾಗಿ ತೊದಲುತ್ತಿತ್ತು.

‘ಬೇಡ ಬಿಡಿ. ಇದನ್ನೇ ಮಾತಾಡೋಣ. ಪಾರ್ಟಿಯ ಪ್ರಾರಂಭದಲ್ಲಿ ನಿಮಗೊಂದು ಫೋನ್ ಕರೆ ಬಂತು. ನೀವು ಎದ್ದು ಹೊರಗಡೆ ಹೋದಿರಿ. ಫೋನಿನಲ್ಲಿ ಮಾತನಾಡುತ್ತ, ವಾಚು ನೋಡುತ್ತ, ‘ಈಗ ಬರೋಕಾಗೊಲ್ಲ, ಇನ್ನೂ ಪಾರ್ಟಿ ಶುರುವಾಗಿಲ್ಲ. ಒಂದಷ್ಟು ಹೊತ್ತು ಕಳೆದು ಬರುತ್ತೇನೆ’ ಎಂದು ಹೇಳಿ ಮರಳಿ ಬಂದು ಕುಡಿಯಲು ಕೂತಿರಿ. ಆದರೂ ನಿಮ್ಮ ಮನಸ್ಸು ಕೇಳಲಿಲ್ಲ. ಕುಳಿತಲ್ಲಿ ಕೂರಲಾಗದೆ ಚಡಪಡಿಸಿದಿರಿ. ಎದ್ದು ಹೊರಗಡೆ ಹೋದಿರಿ’.

‘ಹಾಂ. ಹೌದು. ಲ್ಯಾಬ್‌ನಿಂದ ಅರ್ಜೆಂಟ್ ಫೋನ್ ಮಾಡಿದ್ರು. ಹೋಗಿ ಬಂದಿದ್ದೆ. ಏನಾಯ್ತೀಗ?’

‘ಲ್ಯಾಬ್‌ನಿಂದ ಯಾರು ಫೋನ್ ಮಾಡಿದ್ರು?’